KARNATAKA LEGISLATIVE ASSEMBLY RESEARCH AND REFERENCE BRANCH
PAPER CLIPPINGS
DEPARTMENT / SUBJECT:
NAME OF THE NEWS PAPER:
DATE 23/12/2019

# ಮುಸ್ಲಿಮರ ವಿರುದ್ಧ ಅಲ್ಲ

23/12/19

## ▌ಎನ್‌ಆರ್‌ಸಿ ಬಗ್ಗೆ ಕೈ, ನಗರ ನಕ್ಸಲರಿಂದ ಸುಳ್ಳಿನ ಪ್ರಚಾರ: ಪ್ರಧಾನಿ ಮೋದಿ
## ▌ಯಾರ ಪೌರತ್ವವನ್ನೂ ಕಿತ್ತುಕೊಳ್ಳುವುದಿಲ್ಲ; ವಿರೋಧಿಸುವವರು ಕಾಯ್ದೆ ಓದಲಿ

**ನವದೆಹಲಿ:** ಪೌರತ್ವ ತಿದ್ದುಪಡಿ ಕಾಯ್ದೆ, ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ದೇಶದ ಮುಸ್ಲಿಮರನ್ನು ಗುರಿಯಾಗಿಸಿ ಜಾರಿಗೆ ತಂದಿಲ್ಲ, ನಗರ ನಕ್ಸಲರು ಮತ್ತು ಕಾಂಗ್ರೆಸ್ ಈ ಬಗ್ಗೆ ದೇಶವ್ಯಾಪಿ ಅಪಪ್ರಚಾರ ನಡೆಸುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ವಾಗ್ದಾಳಿ ನಡೆಸಿದ್ದಾರೆ.

ಫೆಬ್ರವರಿಯಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆ ಪ್ರಯುಕ್ತ ನವದೆಹಲಿಯ ರಾಮಲೀಲಾ ಮೈದಾನದಲ್ಲಿ ಬಿಜೆಪಿಯ ಪ್ರಚಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪೌರತ್ವ ತಿದ್ದುಪಡಿ ಕಾಯ್ದೆಯಿಂದ ಯಾವುದೇ ಸಮುದಾಯದ ಪೌರತ್ವ ಕಿತ್ತುಕೊಳ್ಳಲಾಗುವುದಿಲ್ಲ, ಈ ಬಗ್ಗೆ ಮುಸ್ಲಿಂ ಸಮುದಾಯದಲ್ಲಿ ತಪ್ಪು ತಿಳಿವಳಿಕೆ ಮತ್ತು ಅಪಪ್ರಚಾರ ನಡೆಸಲಾಗುತ್ತಿದೆ ಎಂದು ಪ್ರಧಾನಿ ಕಟುವಾಗಿ ಟೀಕಿಸಿದ್ದಾರೆ.

ಪ್ರಸ್ತಾವಿತ ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಜಾರಿಗೆ ತರುವುದರಿಂದ ಅನಾಹುತವೇ ನಡೆದು ಹೋಗುತ್ತದೆ ಎಂಬ ರೀತಿಯಲ್ಲಿ ತಮ್ಮ ನೇತೃತ್ವದ ಸರ್ಕಾರದ ವಿರುದ್ಧ ಸಲ್ಲದ ಸುಳ್ಳುಗಳನ್ನು ಸೃಷ್ಟಿಸಲಾಗುತ್ತಿದೆ. ಚುನಾವಣೆಯಲ್ಲಿ ಎದುರಿಸಿ ಗೆಲ್ಲಲಾಗದ ಪ್ರತಿಸ್ಪರ್ಧಿಗಳು ಇದೀಗ ಸುಳ್ಳಿನ ಮೂಲಕ ದೇಶವನ್ನು ಒಡೆಯಲು ಮುಂದಾಗಿದ್ದಾರೆ. ಉನ್ನತ ಸ್ತರಗಳಲ್ಲಿ ಇರುವವರು ನಕಲಿ ವಿಡಿಯೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟು ಜನರಿಗೆ ಕುಮ್ಮಕ್ಕು ನೀಡುತ್ತಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಗಂಭೀರವಾಗಿ ಆರೋಪಿಸಿದ್ದಾರೆ. 2014ರಲ್ಲಿ ಎನ್‌ಡಿಎ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ಎನ್‌ಆರ್‌ಸಿ ವಿಚಾರವನ್ನು ತಮ್ಮ ನೇತೃತ್ವದ ಸರ್ಕಾರ ಸಂಸತ್‌ನಲ್ಲಿ, ಕೇಂದ್ರ ಸಂಪುಟ ಸಭೆಯಲ್ಲಿ ಚರ್ಚೆಯನ್ನೇ ಮಾಡಿಲ್ಲ ಎಂದಿದ್ದಾರೆ. ಸುಪ್ರೀಂಕೋರ್ಟ್ ಆದೇಶ ನೀಡಿದ ಹಿನ್ನೆಲೆಯಲ್ಲಿ ಅಸ್ಸಾಂನಲ್ಲಿ ಅದನ್ನು ಜಾರಿಗೊಳಿಸಲಾಗಿದೆ ಎಂದರು ಪ್ರಧಾನಿ.

ಕಾಂಗ್ರೆಸ್ ನೇತೃತ್ವದ ಸರ್ಕಾರದ ಅವಧಿಯಲ್ಲಿಯೇ ಈ ಅಂಶ ಜಾರಿಗೆ ತರಲು ಯೋಜನೆ ರೂಪಿಸಲಾಗಿತ್ತು. ಆಗ ವಿರೋಧ ಮಾಡದವರು ಈಗ ಏಕೆ ಪ್ರಶ್ನೆ ಮಾಡುತ್ತಿದ್ದಾರೆ ಎಂದರು.

**ವಶ ಕೇಂದ್ರಗಳಿಲ್ಲ:** ದೇಶದಲ್ಲಿ ಅಕ್ರಮ ವಲಸಿಗರನ್ನು ಸೆರೆ ಹಿಡಿದು ಇರಿಸುವಂಥ ಕೇಂದ್ರಗಳು ಇಲ್ಲ, ಇಷ್ಟು ಮಾತ್ರವಲ್ಲ ಯಾವುದೇ ಭಾಗದಲ್ಲಿಯೇ ಆಗಲಿ ಮುಸ್ಲಿಮರನ್ನು ವಶಕ್ಕೆ ಪಡೆದೂ ಇಲ್ಲ, ಈ ಬಗ್ಗೆ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು, ನಗರ ನಕ್ಸಲರು ಸುಳ್ಳಿನ ಮೂಲಕ ಪ್ರಚಾರ ನಡೆಸುತ್ತಿದ್ದಾರೆ ಎಂದು ಪ್ರಧಾನಿ ಆರೋಪ ಮಾಡಿದ್ದಾರೆ.

ನೀವು ಪಡೆದುಕೊಂಡಿರುವ ವಿದ್ಯಾಭ್ಯಾಸಕ್ಕಾದರೂ ಕೊಂಚ ಗೌರವ ಕೊಡಿ ಎಂದು ಟೀಕಾಕಾರರನ್ನು ಲೇವಡಿ ಮಾಡಿದ ಪ್ರಧಾನಿ ಮೋದಿ, ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಒಂದು ಬಾರಿ ಓದಿ ನೋಡಿಕೊಳ್ಳಿ ಎಂದರು.

▶ 6ನೇ ಪುಟಕ್ಕೆ

### ಪ್ರಧಾನಿ ಹೇಳಿದ್ದೇನು?

- ನನ್ನನ್ನು ಆಗದವರು ನನ್ನ ಪ್ರತಿಕೃತಿ ಸುಡಲಿ. ಆದರೆ ಭಾರತವನ್ನು ದ್ವೇಷಿಸುವುದು ಬೇಡ. ಸಾರ್ವಜನಿಕ ಆಸ್ತಿಗಳನ್ನು ಸುಡಬೇಡಿ.
- ನಮ್ಮ ಸರ್ಕಾರ ಹಲವು ಯೋಜನೆಗಳನ್ನು ಜಾರಿ ಮಾಡುವಾಗ ನೀವು ದೇಗುಲಗಳಿಗೆ, ಮಸೀದಿಗೆ ಹೋಗುವವರೋ ಎಂದು ಕೇಳಿ ಚಾಲನೆ ನೀಡಿಲ್ಲ.
- ನನ್ನ ನೇತೃತ್ವದ ಸರ್ಕಾರದ ಯೋಜನೆಗಳು ತಾರತಮ್ಯಕ್ಕೆ ಕಾರಣವಾಗಿದೆಯೇ ಎಂದು ಹೇಳುವವರು ಅದನ್ನು ಸಾಬೀತು ಮಾಡಲಿ.
- ಮುಸ್ಲಿಮರಿಗೆ ತಪ್ಪು ಮಾಹಿತಿ ನೀಡಲಾಗಿದೆ. ಸರ್ಕಾರದ ಯೋಜನೆಗಳ ಫಲಾನುಭವ ಪಡೆಯಲು ದಾಖಲೆಗಳು ಒಂದು ಅಡ್ಡಿಯೇ ಆಗಬಾರದು.



### ಬಲೆಗೆ ಸಿಲುಕಬೇಡಿ

ದೇಶದ ಯುವಜನರೇ ಸುಳ್ಳಿನ ಬಲೆಗೆ ಬೀಳಬೇಡಿ ಮತ್ತು ಒಂದು ಬಾರಿ ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಓದಿ ತಿಳಿದುಕೊಳ್ಳಿ ಎಂದು ಸಲಹೆ ಮಾಡಿದ್ದಾರೆ ಮೋದಿ. 'ಪರಿಷ್ಕೃತ ಕಾಯ್ದೆ ಪೌರತ್ವ ಕಿತ್ತುಕೊಳ್ಳಲು ಇರುವುದಕ್ಕೆ ಅಲ್ಲ, ಈಗಾಗಲೇ ಭಾರತದಲ್ಲಿ ಹಲವು ವರ್ಷಗಳಿಂದ ಇರುವ ನಿರಾಶ್ರಿತರ ಅನುಕೂಲಕ್ಕಾಗಿ ಮಾಡಲಾಗಿದೆ, ಇದರಿಂದ ಹೊಸತಾಗಿ ಆಗಮಿಸಿದ ನಿರಾಶ್ರಿತರಿಗೆ ಲಾಭವಾಗದು' ಎಂದು ಹೇಳಿದ್ದಾರೆ.

ಮನಮೋಹನ್ ಸಿಂಗ್ ಏನು ಹೇಳಿದ್ದರು ಎಂದು ಕೇಳಿಸಿಕೊಳ್ಳಿ. ದೇಶದ ಜನರು ಭೀತಿಪಡುವ ವಾತಾವರಣವನ್ನು ಗೃಹ ಸಚಿವರೇ ಸೃಷ್ಟಿ ಮಾಡಿದ್ದಾರೆ.

• ಆನಂದ ಶರ್ಮಾ, ಕಾಂಗ್ರೆಸ್ ನಾಯಕ

ಕಾಯ್ದೆಯಿಂದ ದೇಶದ ಮುಸ್ಲಿಮರಿಗೆ ತೊಂದರೆ ಆಗುವುದಿಲ್ಲ. ವೋಟ್ ಬ್ಯಾಂಕ್‌ಗಾಗಿ ಕಾಂಗ್ರೆಸ್ ಈ ಬಗ್ಗೆ ಸುಳ್ಳು ಪ್ರಚಾರ ಮಾಡುತ್ತಿದೆ.

• ನಿತಿನ್ ಗಡ್ಕರಿ, ಕೇಂದ್ರ ಸಚಿವ